ಸಾಕ್ಷಿಯನ್ನು ದಿಃ 25.04.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

**ಪಾಟೀ ಸವಾಲುಃ 2 ನೇ** ಎದುರುದಾರರ ಪರ ವಕೀಲರಿಂದಃ

ನಾನು ಆನಂದೂರಿನಲ್ಲಿ 50-60 ವರ್ಷಗಳಿಂದ ವಾಸವಿದ್ದೇನೆ. ನನಗೆ ಸಂಬಂದಪಟ್ಟ ಆಸ್ತಿಗಳೆಲ್ಲ ಅದೇ ಗ್ರಾಮದಲ್ಲಿ ಇದೆ. ಲಕ್ಷ್ಮಮ್ಮ ನನ್ನ ಹೆಂಡತಿ. ಸಂಧ್ಯಾರಾಣಿ ಮತ್ತು ಯೋಗೇಶ ನನ್ನ ಮಕ್ಕಳು. ಈಗ ನ್ಯಾಯಾಲಯದ ಮುಂದೆ ಇರುವ ಸಂದೇಶ್ ನನ್ನ ಮಗ. ಆನಂದೂರು ಗ್ರಾಮದ ಸರ್ವೆ ನಂ. 375/03 ಮತ್ತು 387/01 ನನಗೆ ಸೇರಿದ ಆಸ್ತಿಗಳು. ಈ ಸ್ವತ್ತುಗಳಿಗೆ ನಾನೇ ಸ್ವಾಧೀನದಲ್ಲಿದ್ದೇನೆ. 2 ನೇ ಎದುರುದಾರರು ನನಗೆ ಪರಿಚಯವಿರುತ್ತಾರೆ. ಈ ಎರಡು ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ಮಾರಾಟ ಮಾಡಲು ಒಪ್ಪಿ 02 ನೇ ಎದುರುದಾರರಿಗೆ ದಿನಾಂಕಃ 10.11.2014 ರಂದು ಕರಾರು ಮಾಡಿಕೊಟ್ಟಿದ್ದೆನು. ಈ ಕರಾರು ಉಪನೊಂದಣಿ ಅಧಿಕಾರಿ ಕಚೇರಿಯಲ್ಲಿ ನೋಂದಣಿ ಆಗಿರುತ್ತದೆ. ಈ ಕರಾರನ್ನು ನಾನು, ನನ್ನ ಹೆಂಡತಿ ಮತ್ತು ಮಕ್ಕಳಾದ ಸಂಧ್ಯಾರಾಣಿ ಮತ್ತು ಯೋಗೇಶ ರವರು ಬರೆದುಕೊಟ್ಟಿರುತ್ತೇವೆ. ಈ ಕರಾರನ್ನು ಬರೆದುಕೊಡುವ ಸಮಯದಲ್ಲಿ ನನ್ನ ಮಗ ಸಂದೇಶ್ ಸಹ ನಮ್ಮ ಜೊತೆಗಿದ್ದರು ಎಂದರೆ ಸರಿಯಲ್ಲ. ಆ ರೀತಿಯಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕರಾರು ಬರೆದುಕೊಡುವ ಸಮಯದಲ್ಲಿ ನನಗೆ ಇನ್ನೊಬ್ಬ ಮಗ ಇದ್ದಾನೆ, ಅವರ ಕಡೆಯಿಂದಲೂ ಕರಾರಿಗೆ ಸಹಿ ಮಾಡಿಸಿಕೊಡುತ್ತೇನೆ ಎಂಬುದಾಗಿ ನಾನು 2 ನೇ ಎದುರುದಾರರಿಗೆ ಹೇಳಿರುವುದಿಲ್ಲ. ಆ ರೀತಿ ಹೇಳಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ಹೆಚ್ಚಿನ ಹಣವನ್ನು ಪಡೆಯಲು ನನ್ನ ಮಗನನ್ನು ಕರೆದುಕೊಂಡು ಬಂದು ಸದರಿ ಕರಾರಿಗೆ ಅವನಿಂದ ಸಹಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಎರಡೂ ಸರ್ವೆ ನಂ. ಜಮೀನುಗಳಿಗೆ ಕ್ರಯದ ಮೊತ್ತ 1,70,92,500/- ರೂ. ಗಳು ನಿಗಧಿಯಾಗಿತ್ತು. ಈ ಕರಾರು ಆದ ದಿನ 2 ನೇ ಎದುರುದಾರಿಂದ ನಾನು 12,00,000/- ರೂ.ಗಳನ್ನು ಡಿ.ಡಿ. ಮುಖಾಂತರ ಮುಂಗಡ ಹಣ ಪಡೆದುಕೊಂಡಿರುತ್ತೇನೆ. ಈ ಕರಾರಿನಲ್ಲಿ ಸರ್ವೆ ನಂ. ಜಮೀನುಗಳು ಅನ್ಯಕ್ರಾಂತವಾದ 06 ತಿಂಗಳ ನಂತರ ಕ್ರಯ ಪತ್ರವನ್ನು ಬರೆದುಕೊಡುತ್ತೇವೆ ಎಂಬುದಾಗಿ ತಿಳಿಸಿರುತ್ತೇವೆ.

ಅದೇ ದಿನ ನಾನು, ನನ್ನ ಹೆಂಡತಿ ಮತ್ತು ಮಕ್ಕಳಾದ ಸಂಧ್ಯಾರಾಣಿ ಮತ್ತು ಯೋಗೇಶ ಸೇತಿ 02 ನೇ ಎದುರುದಾರರಿಗೆ ಆ ಎರಡು ಸರ್ವೆ ನಂ. ಜಮೀನಿಗೆ ಸಂಬಂಧಿಸಿದಂತೆ

ಸಾಮಾನ್ಯ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ತೋರಿಸಿದ ದಾಖಲೆ ಮೇಲೆ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸಾಮಾನ್ಯ ಅಧಿಕಾರ ಪತ್ರದ ನಕಲನ್ನು 1 ನೇ ಎದುರುದಾರರ ವಕೀಲರ ತಕರಾರಿಗೆ ಒಳಪಟ್ಟು ನಿ.ಆರ್. 15 ಎಂದು ಗುರುತಿಸಲಾಯಿತು. ಈ ಪತ್ರಕ್ಕೆ ನನ್ನ ಮಗ ಸಂದೇಶ್ ಸಹಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಮಾಡಿದ ದಿನವೇ ಸಾಮಾನ್ಯ ಅಧಿಕಾರ ಪತ್ರವನ್ನು ಮಾಡಿಕೊಟ್ಟು ನಾವೆಲ್ಲರೂ ಅದಕ್ಕೆ ಸಹಿ ಮಾಡಿ 02 ನೇ ಎದುರುದಾರರು ಆ ಎರಡು ಸರ್ವೆ ನಂ. ಸ್ವತ್ತಿಗೆ ಸಂಧಪಟ್ಟಂತೆ ನಕ್ಷೆ, ಖಾತೆ ವಗೆರೆ ಯನ್ನು ಮಾಡಿಸಿಕೊಳ್ಳಲು, ನಮ್ಮ ಪರವಾಗಿ ಕ್ರಯಪತ್ರವನ್ನು ಬರೆದುಕೊಡಲು ಅಧಿಕಾರ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಬಿಟ್ಟರೆ 02 ನೇ ಎದುರುದಾರರಿಗೆ ನಾವು ಯಾವುದೇ ದಾಖಲೆಯನ್ನು ಬರೆದುಕೊಟ್ಟಿಲ್ಲ. ಈ ಎರಡು ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಪ್ರಾಧಿಕಾರವು ಜಮೀನನ್ನು ಸ್ವಾಧೀನಪಡಿಸಿಕೊಂಡಲ್ಲಿ ಅದರ ಪರಿಹಾರವನ್ನು 02 ನೇ ಎದುರುದಾರರೇ ಪಡೆದುಕೊಳ್ಳಬಹುದು ಎನ್ನುವುದಾಗಿ ಅಧಿಕಾರವನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಸಾಮಾನ್ಯ ಅಧಿಕಾರ ಪತ್ರದಡಿಯಲ್ಲಿ 02 ನೇ ಎದುರುದಾರರಿಗೆ ನಾವೆಲ್ಲಾ ಸೇರಿ ಅಧಿಕಾರ ಕೊಟ್ಟಿದ್ದರೂ ಸಹ ಅವರಿಗೆ ಮೊಸ ಮಾಡಬೇಕು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 07 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮಗಳು ಸಂಧ್ಯಾರಾಣಿ ಪಿ.ಯು.ಸಿ ವರೆಗೆ ಓದಿದ್ದಾಳೆ. ನನ್ನ ಮಗ ಸಂದೇಶ್ ರವರು ಬಿ.ಇ. ಓದಿದ್ದಾನೆ. ಯೋಗೇಶ್ ರವರು 08 ನೇ ತರಗತಿಯವರೆಗೆ ಓದಿದ್ದಾನೆ. ನನಗೆ ಕನ್ನಡ ಓದಲು ಬರುವುದಾದರೂ ನನ್ನ ಕಣ್ಣು ಮಂಜಿರುವುದರಿಂದ ಓದಲಾಗುವುದಿಲ್ಲ. 2014 ನೇ ಸಲಿನಲ್ಲಿ ನನ್ನ ಕಣ್ಣು ಮಂಜು ಇರಲಿಲ್ಲ. ಯಾವುದೇ ದಾಖಲೆಗಳನ್ನು ಸಹಿ ಮಾಡುವ ಮೊದಲು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ಹಾಗಾಗಿ ಸಾಮಾನ್ಯ ಅಧಿಕಾರ ಪತ್ರದಲ್ಲಿ ಬರೆದಿರುವ ಅಂಶವನ್ನು ಓದಿ ತಿಳಿದುಕೊಂಡು ಆ ನಂತರ ನಾವೆಲ್ಲರೂ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರವನ್ನು ತಿಳಿದು 02 ನೇ ಎದುರುದಾರರಿಗೆ ಮೊಸ ಮಾಡಬೇಕೆಂಬ ◌ೌದ್ದೇಶದಿಂದ ಮತ್ತು ಅವರಿಗೆ ಪರಿಹಾರದ ಹಣವನ್ನು ತಪ್ಪಿಸಬೇಕೆಂಬ ಕಾರಣದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ಹಾಗೂ ಸಾಮಾನ್ಯ ಅಧಿಕಾರ ಪತ್ರವನ್ನು ಬರೆದುಕೊಡುವ ಸಮಯಕ್ಕೆ ಎರಡು ಜಮೀನುಗಳು ಭೂ ಸ್ವಾಧೀನ ಆಗಿರಲ್ಲಿಲ್ಲ ಎನ್ನುವುದಕ್ಕೆ ಕರಾರು ಪತ್ರವನ್ನು ಬಿಟ್ಟರೇ ಬೇರೆ ಯಾವುದೇ ದಾಖಲೆಯನ್ನು ನಾವು ಬರೆದುಕೊಟ್ಟಿರುವುದಿಲ್ಲ ಎಂದು ಸಾಕ್ಷಿಯು ಹೇಳುತ್ತಾರೆ. ಸಾಮಾನ್ಯ

ಅಧಿಕಾರ ಪತ್ರದ ಆಧಾರದ ಮೇಲೆ 02 ನೇ ಎದುರುದಾರರು ಆ ಎರಸು ಜಮೀನುಗಳ ಅನ್ಯಕ್ರಾಂತಕ್ಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಇಲಾಖೆಗೆ ವ್ಯವಹರಿಸಿರುತ್ತಾರೆ ಎಂದರೆ ಸರಿಯಲ್ಲ. 2016 ಫೆಬ್ರವರಿಯಲ್ಲಿ ಆ ಜಮೀನುಗಳ ಮೇಲೆ ವಿದ್ಯುತ್ ಲೈನ್ ಹೋಗುತ್ತದೆ ಎಂಬುದಾಗಿ ಪವರ್ ಗ್ರಿಡ್ ನವರು ನನಗೆ ನೋಟೀಸನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ. 382, 383, 386, 384 ಇವುಗಳಲ್ಲಿಯೂ ಸಹ ಪವರ್ ಗ್ರಿಡ್ ನವರು ವಿದ್ಯುತ್ ಲೈನ್ ಎಳೆದಿರುತ್ತಾರೆ ಎಂದರೆ ಸರಿ. ಸರ್ವೆ ನಂ. 382, 383, 386, 384 ನ ಮಾಲೀಕರು ನಿಮ್ಮ ಸಂಬಂಧಿಕರು ಎನ್ನುವುದಕ್ಕೆ ಅಕ್ಕಪಕ್ಕದವರು. ಈ ಸರ್ವೆ ನಂ. ಜಮೀನುಗಳು ಸಹ 02 ನೇ ಎದುದಾರರಿಗೆ ಕರಾರು ಆಗಿದೆ. ಆದೇ ರೀತಿ ಈ ಸರ್ವೆ ನಂ. ಜಮೀನುಗಳ ಮಾಲೀಕರು 02 ನೇ ಎದುರುದಾರಿಗೆ ಜಿಪಿಎ ಬರೆದುಕೊಟ್ಟಿರುತ್ತಾರ ಎನ್ನುವುದು ನನಗೆ ಗೊತ್ತಿಲ್ಲ. ಪವರ್ ಗ್ರಿಡ್ ಪ್ರಾಜೆಕ್ಟ್ ಬಂದ ಮೇಲೆ ಜಮೀನಿನ ಅನ್ಯ ಕ್ರಾಂತವಾಗುವುದಿಲ್ಲ ಎನ್ನುವುದಾಗಿ ಡಿಸಿ ರವರು ಆದೇಶ ಮಾಡಿರುತ್ತಾರೆ ಎನ್ನುವುದು ಗೊತ್ತಿಲ್ಲ. ಆ ವಿಚಾರ ನನಗೆ ಖುದ್ದು ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಈ ಪವರ್ ಗ್ರಿಡ್ ಲೈನ್ ಹಿರಿಯೂರು ಇಂದ ಮೈಸೂರಿಗೆ ಬರುವಂತ ಲೈನ್ ಆಗಿರುತ್ತದೆ. ಒಂದು ಪವರ್ ಪೋಲ್ ನಮ್ಮ ಜಮೀನಿನ ಸರ್ವೆ ನಂ. 387 ಕ್ಕೆ ಫಿಕ್ಸ್ ಆಗಿರುತ್ತದೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು, ಮುಂದೂಡಲಾಯಿತು.

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು